ಉದ್ಯೋಗಿಯನ್ನು ನಮಗೆ ನಿಯೋಜಿಸುವಂತೆ ಆ ಕಂಪೆನಿಗೆ ಹೇಳುತ್ತೇನೆ. ನೀನು ಚಿಂತೆ ಮಾಡಬೇಡ, ಎಲ್ಲವೂ ಸರಿಹೋಗುತ್ತದೆ' ಎಂಬ ಎಂದಿನ ಅವರ ಸಮಾಧಾನದ ಮಾತು ನಿರ್ಮಲಾರನ್ನು ಕೆರಳಿಸಿತು.

'ನಿಮಗೆ ನೆನಪಿದೆಯೇ? ನೀವು ಆ ಪ್ಯಾಕೇಜ್ ತೆಗೆದುಕೊಳ್ಳುವಾಗ ಅವರ ಉದ್ಯೋಗಿಗಳನ್ನು ಗೌರವಯುತವಾಗಿ ನಡೆಸಿಕೊಳ್ಳುತ್ತೇವೆ ಎಂದು ಸಹಿ ಹಾಕಿದ್ದಿರಿ. ನಿನ್ನೆ ನಿಮ್ಮ ನಡವಳಿಕೆಯಿಂದ, ಮಾತಿನಿಂದ ಆತನ ಮನಸ್ಸಿಗೆ, ಆತನ ಆತ್ಮಗೌರವಕ್ಕೆ ಎಷ್ಟು ಘಾಸಿಯಾಗಿರಬಹುದು ಎಂದು ಯೋಚಿಸಿದ್ದೀರಾ? ಆ ಚಿಕ್ಕಹೆಗಲ ಮೇಲೆ ಎಷ್ಟು ಜವಾಬ್ದಾರಿ ಇದೆ ಎನ್ನುವ ಚಿಕ್ಕ ಅರಿವಾದರೂ ನಿಮಗೆ ಇದೆಯಾ? ನಾನೇ ಅವನ ಕಂಪೆನಿಗೆ ಕರೆ ಮಾಡಿ ಪರಿಸ್ಥಿತಿಯನ್ನು ವಿವರಿಸಿ ಅವನನ್ನು ಕೆಲಸದಿಂದ ತೆಗೆಯದಂತೆ ವಿನಂತಿಸಿಕೊಂಡೆ. ನಿನ್ನೆ ನೀವು ಅವನನ್ನು ಕೆಟ್ಟದಾಗಿ ನಡೆಸಿಕೊಂಡ ರೀತಿಯನ್ನು ಒಂದೊಮ್ಮೆ ಅವನು ಅಲ್ಲಿ ಹೇಳಿದ್ದರೆ ನಿಮ್ಮ ಮೇಲೇ ಕ್ರಮ ತೆಗೆದುಕೊಳ್ಳುತ್ತಿದ್ದರು. ಆದರೆ ಅವನು ತನ್ನ ಕೆಲಸಕ್ಕೆ ಕಂಟಕ ಬರುತ್ತದೆ ಎಂದು ಗೊತ್ತಿದ್ದರೂ ಆತ ಮಾತ್ರ, 'ಏನೋ ಸಿಟ್ಟಿನಲ್ಲಿ ಒಂದು ಮಾತು ಹೇಳಿದ್ದಾರೆ, ವಯಸ್ಸಾದವರಿಗೆ ಮತ್ತೆ ಕಷ್ಟ ಕೊಡುವುದು ಬೇಡ, ನಾನೇ ಕೆಲಸ ಬಿಡುತ್ತೇನೆ ಎಂದನಂತೆ'. ಆ ಹುಡುಗನಿಗೆ ಇರುವ ಪ್ರಬುದ್ಧತೆ ನಿಮಗೆ ಈ ವಯಸ್ಸಿನಲ್ಲೂ ಇಲ್ಲ. ನಮಗೆ ವಯಸ್ಸಾದವರು ಎಂಬ ಅನುಕಂಪವಾದರೂ ಈ ಸಮಾಜದಿಂದ ದೊರೆಯುತ್ತದೆ ಆದರೆ ಇವನಿಗೆ? ಅವನಿಗೆ ಬೇರೆಯವರ ಸುಖ ದುಃಖಗಳ ಅರಿವಿದೆ. ಇಷ್ಟು ಚಿಕ್ಕವಯಸ್ಸಿಗೆ ತನ್ನವರಿಗೋಸ್ಕರ ಮಿಡಿಯುತ್ತಿದ್ದಾನೆ, ದುಡಿಯುತ್ತಿದ್ದಾನೆ' ಆಕೆಯ ಮನಸ್ಸಿನ ನೋವಿನ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಿರುವಂತೆ ಭಾಸವಾಯಿತು ಡಾ. ವಿನ್ಸಿಯವರಿಗೆ.

ತಮ್ಮದೂ ತಪ್ಪಿದೆ ಎನ್ನುವುದನ್ನು ಒಪ್ಪಿಕೊಳ್ಳಲು ಸಾಧ್ಯವಾಗದೇ 'ಏನೋ ಕೋಪದಲ್ಲಿ ನಿನ್ನೆ ಒಂದೆರಡು ಮಾತನಾಡಿದೆ ಅಷ್ಟೆ. ನನ್ನ ಮನೆಯನ್ನು, ನನ್ನ ಕುಟುಂಬವನ್ನು ರಕ್ಷಿಸುವುದು, ಒಪ್ಪವಾಗಿಟ್ಟುಕೊಳ್ಳುವುದು ನನ್ನ ಕರ್ತವ್ಯ. ಅದನ್ನು ಮಾಡಿದ್ದೇನೆ' ಎಂದು ಮುಂದುವರಿಸುತ್ತಿದ್ದ ಡಾ.ವಿನ್ಸಿಯವರ ಮಾತನ್ನು ಅಲ್ಲೇ ತುಂಡರಿಸಿದ ನಿರ್ಮಲಾ, 'ತನ್ನದಷ್ಟನ್ನೇ ಒಪ್ಪ ಮಾಡಿಟ್ಟುಕೊಳ್ಳುವ ಧಾವಂತದಲ್ಲಿ ಈ ಏರಿಯಾದ ಪ್ರತಿಯೊಬ್ಬರನ್ನೂ ದೂರ ಮಾಡಿಕೊಂಡಿದ್ದೀರಾ. ಇಲ್ಲದಿದ್ದರೆ ನಮಗೆ ಹೀಗೆ ನಮ್ಮ ಖುಷಿ ಸಂತೋಷಗಳನ್ನು ಹಂಚಿಕೊಳ್ಳಲು, ನಮ್ಮ ಒಂಟಿತನವನ್ನು ನೀಗಿಸಿಕೊಳ್ಳಲು ಯಾವುದೋ 'ಓಲ್ಡ್ ಏಜ್ ಕಂಪಾನಿಯನ್ ಶಿಪ್' ಪ್ರೋಗ್ರಾಮ್‌ಗಳಿಗೆ ಚಂದಾದಾರರಾಗಿ ಈ ರೀತಿ ಬದುಕಬೇಕಿರಲಿಲ್ಲ. ಬದುಕಿನ ಮುಸ್ಸಂಜೆಯಲ್ಲಿ ಬಿಸಿಗಾಳಿಯನ್ನು ತಡೆದು ಕೊಳ್ಳುವ ಶಕ್ತಿ ನಿಮಗೆ ಇರಬಹುದು. ಆದರೆ, ನನಗೆ ಇಲ್ಲ' ಎಂದು ನೋವಿನಿಂದ ಅವರನ್ನೊಮ್ಮೆ ನೋಡಿ ನಿಟ್ಟುಸಿರುಬಿಟ್ಟು ನಿರ್ಮಲಾ ತಮ್ಮ ರೂಮಿಗೆ ತೆರಳಿದ್ದರು. ಸೂರ್ಯ ಅಂದು ತುಸು ಜಾಸ್ತಿಯೇ ಬಿಸಿ ಹೆಚ್ಚಿಸಿದ್ದ. ಮತ್ತೊಂದು ಮಟಮಟ ಮಧ್ಯಾಹ್ನ ಭಾವಗಳನ್ನು ನಿಶ್ಯಬ್ದವಾಗಿಸಲು ಕಾಯುತ್ತಿತ್ತು.

* * *

ಜೀರ್ಣವಾಗದ ನಿನ್ನೆಗಳು, ಉಸಿರುಗಟ್ಟಿಸುವ ಇಂದಿನ ಈ ಮೌನದಲ್ಲಿ ಜೀವ ಸವೆಯುಲು ಪ್ರಾರಂಭವಾಗಿ ತಿಂಗಳುಗಳೇ ಕಳೆದಿವೆ. ಒಡನಾಟದ ಹಂಬಲದ ತೀವ್ರತೆಯ ಕುದಿಯಲ್ಲಿ ಮನಸ್ಸು ದಿನೇ ದಿನೇ ಬಾಡುತ್ತಿದೆ. ಯೋಚನೆಗಳ ಕೊಂಡಿಯನ್ನು ತನ್ನ ಬೀಪ್ ಧ್ವನಿಯಿಂದ ಪಕ್ಕದಲ್ಲಿದ್ದ ಮೊಬೈಲ್ ತುಂಡರಿಸಿ, ಬಂದ ಮೆಸೇಜ್ ನತ್ತ ಅವರ ಚಿತ್ತವನ್ನು ಸೆಳೆಯಿತು.

'ಎರಡನೇ ಬಾಲ್ಯಕ್ಕೊಂದು ಒಡನಾಡಿ' ಸಂಸ್ಥೆಯನ್ನು ಸಂಪರ್ಕಿಸಿರುವುದಕ್ಕೆ ಧನ್ಯವಾದಗಳು. ನೀವು ಹಿಂದೆ ನಮ್ಮ ಸಿಬ್ಬಂದಿಯ ಮೇಲೆ ವಿನಾಕಾರಣ ದೂರು ಹಾಗೂ ನಮ್ಮ ಸಂಸ್ಥೆಗೆ ಕರೆ ಮಾಡಿ ನಮ್ಮನ್ನು ಸಕಾರಣವಿಲ್ಲದೇ ನಿಂದಿಸಿರುವುದಕ್ಕೆ ನಿಮ್ಮ ಹಳೆಯ ಚಂದಾದಾರಿಕೆಯನ್ನು ಹೋಲ್ಡ್‌ನಲ್ಲಿ ಇಡಲಾಗಿದೆ. ಆರು ತಿಂಗಳು ಬಿಟ್ಟು ಪುನಃ ಪ್ರಯತ್ನಿಸಿ. 'ಅದನ್ನು ಓದುತ್ತಲೇ ಕಣ್ಣು ಮಂಜಾಗಿ ಡಾ. ವಿನ್ಸಿ ಅಲ್ಲೇ ಕುಸಿದು ಕುಳಿತರು. ಗೋಡೆಯ ಮೇಲೆ ಚೌಕಟ್ಟಿನಲ್ಲಿ ಬಂಧಿಯಾದ ನಿರ್ಮಲಾರವರ ಫೋಟೋವನ್ನೇ ದಿಟ್ಟಿಸತೊಡಗಿದರು, ಅಲ್ಲಿಂದಲಾದರೂ ಏನಾದರೂ ಪಿಸುಧ್ವನಿ ಕೇಳಬಹುದೇನೋ ಎಂಬಂತೆ. ●